ಅವನು ಬಾಳಬೇಕು ಮತ್ತು ಸಮಾಜದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಬೇಕು. ಇತರರಂತಾಗುವ ಜನರ ಪ್ರವೃತ್ತಿಯನ್ನು ಕುರಿತು ಫ್ರೆಡರಿಕ್ ಪೆರ್ಲ್ಸ್ (Frederick Perls) ಹಾಸ್ಯಮಯವಾಗಿ ಹೀಗೆ ಹೇಳುತ್ತಾರೆ :"ಹುಚ್ಚನು ಹೇಳುತ್ತಾನೆ, 'ನಾನು ಅಬ್ರಹಾಂ ಲಿಂಕನ್' ಎಂದು. ಮನೋರೋಗಿಯು ಹೇಳುತ್ತಾನೆ, 'ನಾನು ಅಬ್ರಹಾಂ ಲಿಂಕನ್ ಆಗಿದ್ದರೆ ಚೆನ್ನಾಗಿತ್ತು' ಎಂದು. ಆರೋಗ್ಯವಂತ ವ್ಯಕ್ತಿಯು ಹೇಳುತ್ತಾನೆ, 'ನಾನು ನಾನೇ, ನೀನು ನೀನೇ' ಎಂದು."

ಈ ರೀತಿ ಪ್ರೌಢಾವಸ್ಥೆಯನ್ನು ತಲುಪಿರದ ಅಹಂಪ್ರತ್ಯಯವು ಅನೇಕ ವಿಕೃತ ರೂಪಗಳಲ್ಲಿ ತೋರಿಕೊಳ್ಳುತ್ತದೆ. ನಮ್ಮ ದೈನಂದಿನ ಕೆಲಸಕಾರ್ಯಗಳಲ್ಲಿ, ಮಾತು ವರ್ತನೆಗಳಲ್ಲಿ ಅದು ಹೇಗೆ ತೋರಿಕೊಳ್ಳುತ್ತದೆ ಎಂಬುದನ್ನು ಅರಿಯುವುದು ನಮ್ಮನ್ನು ನಾವು ಸರಿಪಡಿಸಿಕೊಳ್ಳಲು ಸಹಾಯಕವಾಗುತ್ತದೆ. ಇದರ ವಿವಿಧ ರೂಪಗಳನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

※

## ಕೋಣ ಬಲಿಯಾಗಬೇಕು

ಒಬ್ಬ ರೈತನ ಬಳಿ ಒಂದು ಕೋಣ ಮತ್ತು ಎಂಟು ಎಮ್ಮೆಗಳಿದ್ದವು. ಅರ್ಧರಾತ್ರಿಯ ಸಮಯದಲ್ಲಿ ಕಳ್ಳರು ಬಂದು ಅವುಗಳನ್ನು ಸದ್ದಿಲ್ಲದೆ ಹೊಡೆದುಕೊಂಡು ಹೋದರು. ಅವರು ಹೋಗುತ್ತಿದ್ದ ಹಾದಿಯಲ್ಲಿ ಪೋಲೇರಮ್ಮನ ದೇವಾಲಯವಿತ್ತು. ಆ ದೇವತೆಯೆಂದರೆ ಆ ಪ್ರಾಂತ್ಯದ ಜನಕ್ಕೆಲ್ಲ ಬಹಳ ಭಯಭಕ್ತಿ. ತುಂಬ ಶಕ್ತಿಶಾಲಿ ದೇವತೆಯೆಂಬ ನಂಬಿಕೆ. ಆ ಕಳ್ಳರು 'ಅಮ್ಮಾ! ನಮ್ಮ ಕಳ್ಳತನ ಬಯಲಾಗದಿದ್ದರೆ ಈ ಕೋಣವನ್ನು ನಿನಗೆ ಬಲಿಕೊಡುತ್ತೇವೆ' ಎಂದು ಹರಕೆ ಹೊತ್ತರು.

ಇತ್ತ ರೈತನು ಬೆಳಗೆದ್ದು ನೋಡುತ್ತಾನೆ, ಅವನ ಪಶುಗಳೆಲ್ಲ ಮಾಯವಾಗಿವೆ. ಸರಿ ಅವನು ನೇರವಾಗಿ ಪೋಲೇರಮ್ಮನ ಗುಡಿಗೆ ಹೋಗಿ 'ತಾಯಿ! ಕಾಣೆಯಾದ ಕೋಣ ಹಾಗೂ ಎಮ್ಮೆಗಳೆಲ್ಲ ನನಗೆ ಸಿಗುವಂತೆ ನೀನು ಮಾಡುವುದಾದರೆ ಕೋಣವನ್ನು ನಿನಗೆ ಬಲಿಕೊಡುತ್ತೇನೆ' ಎಂದು ಬೇಡಿಕೊಂಡ.

ಒಟ್ಟಿನಲ್ಲಿ ಕೋಣ ಬಲಿಯಾಗಬೇಕು. ಎಂಟು ಎಮ್ಮೆಗಳೆಂದರೆ ಪಂಚ ಜ್ಞಾನೇಂದ್ರಿಯಗಳು ,ಮನಸ್ಸು, ಬುದ್ಧಿ ಮತ್ತು ಚಿತ್ತ. ಕೋಣವೆಂದರೆ ಅಹಂಕಾರ. ಎಮ್ಮೆಗಳಿದ್ದರೆ ಪರವಾಗಿಲ್ಲ. ಆದರೆ ಕೋಣ ಮಾತ್ರ ಸಾಯಬೇಕು.

(ಸಂಗ್ರಹ : ಭಕ್ತಿ ಸೌರಭ, ತೆಲುಗು ಮೂಲದ ಕನ್ನಡಾನುವಾದ : ಎಂ. ಆರ್. ವಿಶ್ವನಾಥ ರೆಡ್ಡಿ)

# ಪಂಚದಶಿಯಲ್ಲಿ ನಾಟಕದೀಪ

ಸ್ವಾಮಿ ರಾಮಾನುಜಾನಂದ

ಪಂಚದಶಿಯಲ್ಲಿ ಬರುವ ನಾಟಕ ದೀಪವೆಂಬ ರೂಪಕವು ಅತ್ಯಂತ ಪ್ರಸಿದ್ಧವಾದುದು. ಇದರ ಮೂಲಕ ಆತ್ಮತತ್ತ್ವವನ್ನು ಮನ ಮುಟ್ಟುವಂತೆ ವಿವರಿಸಲಾಗಿದೆ. ಈ ಲೇಖನದ ಮೂಲಕ ಅದರ ಪರಿಚಯವನ್ನು ನೀಡಿರುವ ಸ್ವಾಮಿ ರಾಮಾನುಜಾನಂದರು ಕೇರಳದ ತಿರುವಲ್ಲದಲ್ಲಿರುವ ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

---

**ಮಾನವನಿಗೆ** ತಾನು ಇತರ ಪ್ರಾಣಿಗಳಿಗಿಂತ ಶ್ರೇಷ್ಠನೆಂಬ ಹೆಮ್ಮೆ ಇದೆ; ಇದು ಸ್ವಾಭಾವಿಕ. ಆದರೆ, ಆ ಹೆಮ್ಮೆಗೆ ಅರ್ಹನಾಗಬೇಕಾದರೆ, ಅವನು ನಿಜವಾಗಿಯೂ ಮನುಷ್ಯನಾಗಿರಬೇಕು. ಹಾಗಾದರೆ ನಿಜವಾದ ಮನುಷ್ಯನು ಯಾರು? ನಿಜವಾದ ಮನುಷ್ಯನೆಂದರೆ, ತಾನು ಯಾರೆಂದು ತಿಳಿದುಕೊಂಡ ವ್ಯಕ್ತಿ. ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ, ಮನುಷ್ಯ ತನ್ನನ್ನು ತಾನು ತಿಳಿಯಬಲ್ಲ, ತನ್ನ ಬಗ್ಗೆ ಆಲೋಚಿಸಬಲ್ಲ—ವಸ್ತುಪ್ರಜ್ಞೆಯ ಜೊತೆಗೆ ವ್ಯಕ್ತಿಪ್ರಜ್ಞೆಯೂ ಅವನಲ್ಲಿದೆ. ಬೇರೆ ಪ್ರಾಣಿಗಳಿಗೆ ಈ ಶಕ್ತಿಯಿಲ್ಲ.

ನಾವು ಈ ಜಗತ್ತಿನ ರಚನೆಯನ್ನು ನೋಡಿದಾಗ, ಆಶ್ಚರ್ಯಚಕಿತರಾಗುತ್ತೇವೆ. ಆ ಸೃಷ್ಟಿಕರ್ತನ ಚಮತ್ಕಾರ ಕಂಡು ಬೆರಗಾಗುತ್ತೇವೆ. ಈ ಸೃಷ್ಟಿಯ ರಹಸ್ಯವೇನು? ಈ ಸೃಷ್ಟಿಯ ಹಿಂದೆ ಯಾವುದಾದರೂ ಶಕ್ತಿ ಕೆಲಸ ಮಾಡುತ್ತಿದೆಯೆ? ಇತ್ಯಾದಿ ಪ್ರಶ್ನೆಗಳು ಏಳುತ್ತವೆ. ಇವಕ್ಕಿಂತ ಮುಖ್ಯವಾದುವು ಮಾನವನಿಗೆ ತನ್ನ ಬಗ್ಗೆಯೆ ಏಳುವ ಪ್ರಶ್ನೆಗಳು. ಮನುಷ್ಯನ ಅಸ್ತಿತ್ವದ ಅರ್ಥವೇನು? ಅವನ ನಿಜವಾದ ಸ್ವರೂಪವೇನು? ಹೀಗೆ ಹಲವಾರು ಪ್ರಶ್ನೆಗಳು ಬರುತ್ತವೆ. ಹೀಗೆ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುವ ಸಾಮರ್ಥ್ಯವೇ ನಿಜವಾದ ಮನುಷ್ಯತ್ವ.

ಈ ಪ್ರಶ್ನೆಗಳಿಗೆ ಉತ್ತರ ನೀಡಲು ಋಷಿಗಳು, ಮುನಿಗಳು, ಕವಿಗಳು, ತಪಸ್ವಿಗಳು ಪ್ರಯತ್ನಿಸಿದ್ದಾರೆ; ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ, ಯಾವ ಉತ್ತರವೂ ನಮಗೆ ಸಮಾಧಾನ ತರಲಾರದು. ಹಾಗೆಂದು ನಾವು ನಿರಾಶರಾಗಬೇಕೆ? ಬೇರೆ ಬೇರೆ ಜ್ಞಾನಿಗಳ ಅಭಿಪ್ರಾಯ ಮತ್ತು ಅನುಭವಗಳನ್ನು ತಿಳಿಯಲು ಪ್ರಯತ್ನಿಸಬೇಕು. ನಾವೂ ಕೂಡ ಸ್ವತಂತ್ರವಾಗಿ ಈ ವಿಚಾರಗಳನ್ನು ಕುರಿತು ಆಲೋಚಿಸಬೇಕು. ಇಂತಹ ಆಲೋಚನೆಗಳೇ ನಮಗೆ ಘನತೆಯನ್ನು ನೀಡುತ್ತವೆ, ನಮ್ಮನ್ನು ಪ್ರಾಣಿಸಹಜ ಸ್ಥಿತಿಯಿಂದ ಮೇಲೇರಿಸುತ್ತವೆ.

ವಿದ್ಯಾರಣ್ಯ ಸ್ವಾಮಿಗಳು ಅದ್ವೈತದ ಹಿರಿಮೆಯನ್ನು ಸಾರಿದ ಧೀರರಲ್ಲೊಬ್ಬರು. ಅವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಪಂಚದಶೀ' ಎಂಬುದು ಬಹಳ ಪ್ರಖ್ಯಾತ ಗ್ರಂಥ. ಈ ಗ್ರಂಥದಲ್ಲಿ ಹದಿನೈದು ಅಧ್ಯಾಯಗಳಿವೆ. ಆದುದರಿಂದ ಇದಕ್ಕೆ 'ಪಂಚದಶೀ' ಎಂಬ ಹೆಸರು. ಒಂದೊಂದು ಅಧ್ಯಾಯಕ್ಕೆ ಒಂದೊಂದು ಹೆಸರಿದೆ. ಹತ್ತನೆಯ ಅಧ್ಯಾಯದ ಹೆಸರು 'ನಾಟಕ ದೀಪ'. ಒಂದು ಸುಂದರ ರೂಪಕದ ಮೂಲಕ ಮಾನವ ವ್ಯಕ್ತಿತ್ವದ ವಿಶ್ಲೇಷಣೆಯನ್ನು ಇದರಲ್ಲಿ ಮಾಡಿದ್ದಾರೆ.

ಸೃಷ್ಟಿಯ ಮೊದಲು, ಪರಮಾತ್ಮನು ಮಾತ್ರ ಇದ್ದನು. ಆತನು ತನ್ನ ಮಾಯಾ ಶಕ್ತಿಯ ಮೂಲಕ ಈ ವಿಶ್ವವನ್ನು ಸೃಜಿಸಿ ಅದನ್ನು ಪ್ರವೇಶಿಸಿದನು. ದೇವತೆಗಳ ಶರೀರವನ್ನು ಪ್ರವೇಶಿಸಿ, ದೇವತೆಯೆನಿಸಿದನು, ಮನುಷ್ಯ ಶರೀರವನ್ನು ಪ್ರವೇಶಿಸಿ ಮನುಜನಾದನು. ಅವನೇ 'ಸಾಕ್ಷಿ'ಯಾಗಿ ಪ್ರತಿಯೊಬ್ಬನ ಹೃದಯದಲ್ಲಿಯೂ ಇದ್ದು ಸುಖದುಃಖಗಳಲ್ಲಿ ಭಾಗಿಯಾಗದೆ ಎಲ್ಲವನ್ನೂ ನೋಡುತ್ತ, ಆದರೆ ಯಾರಿಗೂ ಕಾಣಿಸದೆ ನೆಲೆಸಿದ್ದಾನೆ. ಎಲ್ಲ ಕ್ರಿಯೆಗಳ ಹಿಂದಿರುವ 'ನಾನು' ಎಂಬ ಸ್ಫುರಣದ ಹಿನ್ನೆಲೆಯೇ ಈ ಸಾಕ್ಷೀಚೈತನ್ಯನು.

ಈಕ್ಷೇ ಶೃಣೋಮಿ ಜಿಘ್ರಾಮಿ
ಸ್ವಾದಯಾಮಿ ಸ್ಪೃಶಾಮ್ಯಹಮ್ |
ಇತಿ ಭಾಸಯತೇ ಸರ್ವಂ ನೃತ್ಯಶಾಲಾಸ್ಥ ದೀಪವತ್ ||
(ಪಂಚದಶೀ. ೧೦.೧೦)

'ನೃತ್ಯಶಾಲೆಯಲ್ಲಿರುವ ದೀಪವು ರಂಗಸ್ಥಲದಲ್ಲಿ ನಡೆಯುವುದನ್ನೆಲ್ಲ ಬೆಳಗುವಂತೆ "ನಾನು ನೋಡುತ್ತೇನೆ" "ನಾನು ಕೇಳುತ್ತೇನೆ" "ನಾನು ಮೂಸುತ್ತೇನೆ" "ನಾನು ಸವಿಯುತ್ತೇನೆ" "ನಾನು ಸ್ಪರ್ಶಿಸುತ್ತೇನೆ" — ಎಂಬ ರೀತಿಯ ಆತ್ಮಪ್ರಜ್ಞೆಯಿಂದ ಸಾಕ್ಷಿಯು ಎಲ್ಲವನ್ನೂ ಬೆಳಗುತ್ತಾನೆ.' ಈ ಆತ್ಮಪ್ರಜ್ಞೆ ಮಾನವನಿಗೆ ಮಾತ್ರ ಸಾಧ್ಯವಾಗುವಂತಹದು.

ನಾಟಕಮಂದಿರದಲ್ಲಿರುವ ದೀಪವು ಆ ಮಂದಿರದ ಒಡೆಯನನ್ನು ನರ್ತಕಿಯನ್ನು ಮತ್ತು ಪ್ರೇಕ್ಷಕರನ್ನು—ಯಾವ ಪಕ್ಷಪಾತವೂ ಇಲ್ಲದೆ—ಪ್ರಕಾಶಿಸುತ್ತದೆ. ಅಲ್ಲದೆ, ಅವರೆಲ್ಲ ತೆರಳಿದ ನಂತರವೂ, ಆ ದೀಪವು ಆ ಸಭಾಗೃಹವನ್ನು ಬೆಳಗಿಸುತ್ತದೆ—

ನೃತ್ಯಶಾಲಾಸ್ಥಿತೋ ದೀಪಃ ಪ್ರಭುಂ ಸಭ್ಯಾಂಶ್ಚ ನರ್ತಕೀಮ್|
ದೀಪಯೇದವಿಶೇಷೇಣ ತದಭಾವೇಽಪಿ ದೀಪ್ಯತೇ ||
(ಪಂಚದಶಿ, ೧೦.೧೧)

ಅಂತೆಯೇ ಸಾಕ್ಷಿ ಚೈತನ್ಯವು ಅಹಂಕಾರ, ಬುದ್ಧಿ ಮತ್ತು ಇಂದ್ರಿಯ ಗೋಚರ ವಸ್ತುಗಳನ್ನು ಬೆಳಗಿಸುತ್ತದೆ. ಅಲ್ಲದೆ, ಸಾಕ್ಷಿಚೈತನ್ಯವು ಯಾವಾಗಲೂ ಪ್ರಕಾಶಸ್ವರೂಪಿಯಾಗಿ ಇರುತ್ತದೆ. ಅಹಂಕಾರಾದಿಗಳು ಇಲ್ಲದಿದ್ದರೂ ಅದು ತನ್ನ ಪಾಡಿಗೆ ತಾನು ಪ್ರಕಾಶಿಸುತ್ತಿರುತ್ತದೆ. ಬುದ್ಧಿಯು ಸಾಕ್ಷಿಚೈತನ್ಯದ ಪ್ರಕಾಶವನ್ನು ಪಡೆದ ಕಾರಣ ಉಜ್ಜ್ವಲವಾಗಿದೆ, ಮತ್ತು ಹಲವಾರು ನರ್ತನಗಳನ್ನು (ಬುದ್ಧಿಯ ಚಮತ್ಕಾರಗಳನ್ನು) ಮಾಡಲು ಸಮರ್ಥವಾಗಿದೆ.

ಈ ಉಪಮೆಯಲ್ಲಿ, ಅಹಂಕಾರವು ಆ ಸಭಾಗೃಹದ ಒಡೆಯ, ಬುದ್ಧಿ ನರ್ತಕಿ, ಇಂದ್ರಿಯಗೋಚರ ವಸ್ತುಗಳು ಪ್ರೇಕ್ಷಕರು, ಇಂದ್ರಿಯಗಳು ವಾದ್ಯಗಳನ್ನು ನುಡಿಸುವ ಕಲಾವಿದರು. ಸಾಕ್ಷೀ ಚೈತನ್ಯವು ಎಲ್ಲವನ್ನೂ ಬೆಳಗಿಸುವ ದೀಪ :

ಅಹಂಕಾರಃ ಪ್ರಭುಃ ಸಭ್ಯಾ ವಿಷಯಾ ನರ್ತಕೀ ಮತಿಃ |
ತಾಲಾದಿಧಾರೀಣ್ಯಕ್ಷಾಣಿ ದೀಪಃ ಸಾಕ್ಷ್ಯವಭಾಸಕಃ ||

ದೀಪವು ತಾನು ಬದಲಾಗದೆ, ಸ್ಥಿರವಾಗಿ ಒಂದೇ ಸ್ಥಳದಲ್ಲಿದ್ದು, ಬದಲಾಗುವ ಎಲ್ಲವನ್ನೂ ಬೆಳಗುತ್ತದೆ. ಅಂತೆಯೇ ಆತ್ಮಚೈತನ್ಯವು ಮನಸ್ಸು, ಬುದ್ಧಿ, ಅಹಂಕಾರ, ಇಂದ್ರಿಯ ಮುಂತಾದ ಆಂತರಿಕ ವಸ್ತುಗಳನ್ನೂ ವಿಷಯಾದಿ ಬಾಹ್ಯ ವಸ್ತುಗಳನ್ನೂ ಬೆಳಗಿಸುತ್ತದೆ. ಆದರೆ ಆತ್ಮನಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಆಂತರಿಕ ಮತ್ತು ಬಾಹ್ಯವಸ್ತುಗಳು ಶರೀರದ ದೃಷ್ಟಿಯಿಂದ— ಅಂದರೆ ಶರೀರದ ಒಳಗೆ ಮತ್ತು ಹೊರಗೆ ಇರುವ ವಸ್ತುಗಳು ಎಂಬ ಅರ್ಥದಲ್ಲಿ. ಆತ್ಮನ ದೃಷ್ಟಿಯಲ್ಲಿ ಒಳಗೆ ಹೊರಗೆ ಎಂಬುದಿಲ್ಲ.

ಬುದ್ಧಿಯ ಚಂಚಲತೆಯಿಂದಾಗಿ ಸಾಕ್ಷಿಯೂ ಚಲಿಸುವಂತೆ ಕಾಣುತ್ತದೆ—ಅದರೊಡನಿರುವ ಸಂಬಂಧದಿಂದಾಗಿ. ಒಂದು ಕಂಡಿಯ ಮೂಲಕ ಮನೆಯೊಳಕ್ಕೆ ಬಂದಿರುವ ಬಿಸಿಲು ಕಿರಣವು ನಿಶ್ಚಲವಾಗಿರುತ್ತದೆ. ಆದರೆ ಅದರಲ್ಲಿ ಒಬ್ಬನು ಕೈಯನ್ನು ಆಡಿಸಿದರೆ ಆ ಕಿರಣವೂ ಅಲ್ಲಾಡಿದಂತೆ ಕಾಣುತ್ತದೆ :

ಗೃಹಾಂತರಗತಃ ಸ್ವಲ್ಪೋ ಗಾವಾಕ್ಷಾದಾತಪೋಽಚಲಃ |
ತತ್ರ ಹಸ್ತೇ ನೃತ್ಯಮಾನೇ ನೃತ್ಯತೀವಾತಪೋ ಯಥಾ ||
(ಪಂಚದಶೀ, ೧೦.೧೮)

ಅಂತೆಯೇ ಮನಸ್ಸಿಗೆ ಚಲನೆ ಇದೆ, ಆತ್ಮನಿಗೆ ಯಾವ ಚಲನೆಯೂ ಇಲ್ಲ. ಅಂತಹ ಆತ್ಮನನ್ನು ಹೇಗೆ ಗ್ರಹಿಸಬಹುದು? ಈ ಪ್ರಶ್ನೆಗೆ ವಿದ್ಯಾರಣ್ಯರು ಕೊಡುವ ಉತ್ತರವೆಂದರೆ, ಆತ್ಮನನ್ನು ಗ್ರಹಿಸುವ ಆವಶ್ಯಕತೆಯಿಲ್ಲ. ಎಲ್ಲಾ ವಿಕಾರಗಳೂ ಮಾಯವಾದಾಗ, ಆತ್ಮನು ಮಾತ್ರ ಇರುತ್ತಾನೆ. ಆತ್ಮನು ಸ್ವಯಂಪ್ರಕಾಶಕ, ಆದುದರಿಂದ ಆತ್ಮನ ಅಸ್ತಿತ್ವಕ್ಕೆ ಯಾವ ಪ್ರಮಾಣವೂ ಬೇಡ. ಈ ವಿಚಾರದಲ್ಲಿ ಏನಾದರೂ ಸಂದೇಹವಿದ್ದರೆ, ಯೋಗ್ಯಗುರುವಿನ ಆಶ್ರಯದಲ್ಲಿ ಶಾಸ್ತ್ರಾಧ್ಯಯನ ಮಾಡಬೇಕು.

ಹೀಗೆ ವಿದ್ಯಾರಣ್ಯ ಮುನಿಗಳು ನಾಟಕ ದೀಪದ ಉಪಮೆಯ ಮೂಲಕ ಆತ್ಮನು ಸ್ವಯಂಪ್ರಕಾಶ ಎಂಬುದನ್ನು ವಿವರಿಸುತ್ತಾರೆ.